ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 21.11.2024.

**ಪಾಟೀ ಸವಾಲುಃ** ವಾದಿಗಳ ಪರ ಶ್ರೀ ಪಿ.ಎನ್.ಎಸ್. ವಕೀಲರಿಂದಃ

ನಾನು 2ನೇ ಪಿಯಸಿ ವರೆಗೆ ಶಿಕ್ಷಣ ಪೂರೈಸಿರುತ್ತೇನೆ. ಮನೆ ಹಂಚಿಕೆಗೆ ನನ್ನನ್ನು ಸಾಕ್ಷಿಯಾಗಿ ಕರೆದಿದ್ದರು ಎಂದರೆ, ಸಾಕ್ಷಿ ಮೊದಲೆ ಹಂಚಿಕೆಯಾಗಿತ್ತು ಆ ಪೈಕಿ ಒಬ್ಬರು ರೂ.80,000/- ಕಿಮ್ಮತ್ತು ಕಟ್ಟಿ ಅದರಲ್ಲಿ ಅರ್ಧ ಭಾಗ ರೂ.40,000/-ಗಳನ್ನು 4ನೇ ಪ್ರತಿವಾದಿ, 3ನೇ ಪ್ರತಿವಾದಿಗೆ

ಕೊಟ್ಟಿರುತ್ತಾರೆ. ಮೇಲೆ ಹೇಳಿದ ವಿಷಯಕ್ಕೆ ಅಷ್ಟೆ ಕಾಗದ ಬರೆಯಲಾಯಿತು ಎಂದರೆ ಸರಿ. ನಾನು ಹೇಳಿದಂತೆ ಯಾವುದೇ ಕಾಗದ ಅಥವಾ ಹಣ ಕೊಡುವುದು ಆಗಿಲ್ಲ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ಮಾತು ಕೇಳಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 21.11.2024.
**ಪಾಟೀ ಸವಾಲುಃ** ವಾದಿಗಳ ಪರ ಶ್ರೀ ಪಿ.ಎನ್.ಎಸ್. ವಕೀಲರಿಂದಃ

ಹಂಚಿಕೆಯಾಗಿದೆ ಎಂದು ಹೇಳಲಾದ ಕಾಲಕ್ಕೆ ನಾನು ಹಾಜರಿದ್ದೆ. ನನ್ನ ಪ್ರಕಾರ ಮನೆಯದು ಮಾತ್ರ ಹಂಚಿಕೆ ಮಾಡುವುದು ಇದೆ ಆ ಕಾರಣ ನಮ್ಮನ್ನು ಸಾಯಬಣ್ಣ ಬರ್ರಿ ಎಂದು ಕರೆದಿದ್ದರು. ಮನೆ ಹಂಚಿಕೆ ನನ್ನ ಸಮಕ್ಷಮ ಆಯಿತು ಎಂದರೆ ಸರಿ. ಮನೆಯದು ಮಾತ್ರ ಹಂಚಿಕೆಯಾಗಿದೆ ಎಂದು ನನಗೆ ಸಾಯಬಣ್ಣ ಹೇಳಿದ್ದರು ಎಂದರೆ, ಸಾಕ್ಷಿ ಮನೆ ಕಿಮ್ಮತ್ತು ರೂ.80,000/- ಮಾಡಿದ್ದರು, ಅದು

ಇಬ್ಬರಿಗೂ ಸರಿ ಹೊಂದುವುದಿಲ್ಲ ಎಂದು ರೂ.80,000/- ಕಿಮ್ಮತ್ತು ಮಾಡಿ, ಚಿಕ್ಕವನಾದ 4ನೇ ಪ್ರತಿವಾದಿ ತಾನೇ ಇಟ್ಟುಕೊಳ್ಳುತ್ತೇನೆ ಅಂತ ಹೇಳಿ, ರೂ.40,000/-ಗಳನ್ನು ಅಂಬಾರಾಯ ತಂದೆ ಸಾಯಬಣ್ಣ ರವರಿಗೆ ಅಂದರೆ 3ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮೇಲೆ ಹೇಳಿದಂತೆ ಮನೆಗೆ ಸಂಬಂಧಪಟ್ಟಂತೆ ಕಾಗದ ಬರೆದು ಎಲ್ಲರು ಒಪ್ಪಿ ಸಹಿ ಮಾಡಿರುತ್ತಾರೆ. ನಾನು ಹೇಳಿದಂತೆ ಯಾವುದೇ ಹಂಚಿಕೆಯಾಗಿಲ್ಲ ಎಂದರೆ ಸರಿಯಲ್ಲ.

ಹಂಚಿಕೆ ಮಾಡಿಕೊಟ್ಟಿರುತ್ತಾರೆ ಎಂದು ಹೇಳಿದ ಮಾತು ಸುಳ್ಳು ಇದೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ಮಾತು ಕೇಳಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**